CPI(M)

# ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ

## ಸಿಪಿಐ(ಎಂ)ಗೆ ಮತ ನೀಡಿ

## ಎಡಪಕ್ಷಗಳನ್ನು ಬಲಪಡಿಸಿ

: ಪ್ರಕಟಣೆ :

**ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)**

ಕರ್ನಾಟಕ ರಾಜ್ಯ ಸಮಿತಿ

ಯುಪಿಎ–2 ರ ಆಡಳಿತಾವಧಿಯಲ್ಲಿ ಮಹಿಳೆಯರು ಅದರಲ್ಲೂ ಮುಖ್ಯವಾಗಿ ಬಡ ಮತ್ತು ದುಡಿಯುವ ಮಹಿಳೆಯರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ತೀವ್ರ ಸಂಕಷ್ಟವನ್ನೆದುರಿಸಿದ್ದಾರೆ. ಅಗತ್ಯ ವಸ್ತುಗಳ ಬೆಲೆಯೇರಿಕೆ, ಸರ್ಕಾರಿ ಅಂಕಿ ಅಂಶಗಳೇ ದೃಢಪಡಿಸುವಂತೆ ತಡೆಯಿರದ ಇಳಿಮುಖವಾಗುತ್ತಿರುವ ಉದ್ಯೋಗವಕಾಶಗಳು, ಏರುತ್ತಿರುವ ಮಹಿಳೆಯರ ಮೇಲಿನ ಹಿಂಸಾಚಾರ ಈ ಎಲ್ಲವೂ ಮಹಿಳೆಯರು ಎದುರಿಸುತ್ತಿರುವ ಸಂಕಷ್ಟಗಳ ಸೂಚನೆಯಾಗಿವೆ. ಯುಪಿಎ–1 ರ ಸರ್ಕಾರವಿದ್ದಾಗ ಎಡಪಕ್ಷಗಳು ನಡೆಸಿದ ಚಳುವಳಿಗಳ ಪರಿಣಾಮವಾಗಿ ಮಹಿಳೆಯರ ಪರವಾಗಿ ತೆಗೆದುಕೊಂಡಿದ್ದ ಅಲ್ಪಸ್ವಲ್ಪ ಪರಿಹಾರಕ್ರಮಗಳೂ ಯುಪಿಎ–2 ಅವಧಿಯಲ್ಲಿ ದುರ್ಬಲಗೊಂಡಿವೆ.

ಪ್ರತಿ 5 ಮಹಿಳೆಯರಲ್ಲಿ 3 ಮಹಿಳೆಯರು ರಕ್ತಹೀನತೆಯಿಂದ ನರಳುವ, ಮೂರು ವರ್ಷದೊಳಗಿನ ಮಕ್ಕಳಲ್ಲಿ ಪ್ರತಿ ಎರಡನೆಯ ಮಗು ಕಡಿಮೆ ತೂಕದ್ದಾಗಿರುವ, ಪ್ರತಿ ಐದರಲ್ಲಿ ಮೂರು ಮಕ್ಕಳು ನಿಕೃಷ್ಟವಾಗಿರುವ ನಮ್ಮ ದೇಶದ 2013–14 ರ ಬಜೆಟ್‌ನಲ್ಲಿ ಬಡಜನತೆಯ ನೆರವಿಗಾಗಿ ಇರುವ ಮಹತ್ ಯೋಜನೆಗಳು ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿಟ್ಟಿರುವ ಮೊತ್ತವನ್ನು ರೂ. 22000 ಕೋಟಿಯಷ್ಟು ಕಡಿತಗೊಳಿಸಲಾಗಿದೆ. ಅದೇ ವೇಳೆಗೆ ದೊಡ್ಡ ಉದ್ಯಮಪತಿಗಳಿಗೆ ಕಾರ್ಪೊರೇಟ್ ತೆರಿಗೆಯಲ್ಲಿ ನೀಡಿರುವ ವಿನಾಯ್ತಿಯ ಮೊತ್ತ 5.26 ಲಕ್ಷ ಕೋಟಿ ರೂಪಾಯಿಗಳು ಸರ್ಕಾರದ ನೆರವಿನಿಂದ ದೊಡ್ಡ ದೊಡ್ಡ ಕಾರ್ಪೊರೇಟ್ ಉದ್ಯಮಿಗಳು ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಹೊಡೆಯುತ್ತಿರುವುದರಿಂದ ಅರಣ್ಯ ಉತ್ಪನ್ನಗಳಾದ ಮೇವು, ಸೊಪ್ಪು, ನೀರು, ಸೌದೆಗಳನ್ನು ಸಂಗ್ರಹಿಸುವ ಮಹಿಳೆಯರ ಬದುಕು ಇನ್ನಷ್ಟು ಸಂಕಷ್ಟಕ್ಕೊಳಗಾಗಿದೆ. ಅಕ್ರಮವಾದ ಭೂ ಒತ್ತುವರಿ, ವಿವಿಧ ಅಭಿವೃದ್ಧಿ ಯೋಜನೆಗಳಿಗಾಗಿ ಭೂ ಸ್ವಾಧೀನದಿಂದಾಗಿ ಆ ಸ್ಥಳಗಳಲ್ಲಿ ಬದುಕುವವರಿಗೆ ಅಲ್ಲಿನ ಸಂಪನ್ಮೂಲಗಳು ಕೈಗೆಟುಕದಂತಾಗಿವೆ. ಸರ್ಕಾರದ ಸಬ್ಸಿಡಿಗಳ ಕಡಿತ ಮತ್ತು ಸಾಮಾಜಿಕ ಯೋಜನೆಗಳ ಖರ್ಚುಗಳಲ್ಲಿನ ಕಡಿತದಿಂದಾಗಿ ಮಹಿಳೆಯರಿಗೆ ಈ ಸೇವೆಗಳು ಅಲಭ್ಯವಾಗಿದ್ದು, ಅವರ ಮೇಲಿನ ಹೊರೆಯನ್ನು ಇನ್ನಷ್ಟು ಹೆಚ್ಚಿಸಿದೆ. ಈ ಎಲ್ಲವುಗಳಿಂದಾಗಿ ಮಹಿಳೆಯರ ಕೆಲಸಗಳಿಗೆ ಕೊನೆಯೆ ಇಲ್ಲದಂತಾಗಿದೆ.

ಯುಪಿಎ ಸರ್ಕಾರದ ವೈಫಲ್ಯಗಳು ಜನತೆಯ ಮನದಲ್ಲಿ ಅತ್ಯಂತ ಹೆಚ್ಚಿನ ಅಸಂತೃಪ್ತಿಗೆ ಕಾರಣವಾಗಿದೆ. ಜನರ ಈ ಅತೃಪ್ತಿಯನ್ನು ಕಾರ್ಪೊರೇಟ್

ಬಲಪಂಥೀಯ ಕೋಮುವಾದಿ ಶಕ್ತಿಯಾದ ಬಿಜೆಪಿ ಬಳಸಿಕೊಳ್ಳಲು ಹವಣಿಸುತ್ತಿದೆ. ಆರ್‌ಎಸ್‌ಎಸ್ ಪ್ರತಿನಿಧಿಸುವ ಕೋಮುವಾದಿ ಸಿದ್ಧಾಂತ ಮತ್ತು ಹಿಂದುತ್ವ ಶಕ್ತಿಗಳು ಮಹಿಳೆಯರನ್ನು ಕೇವಲ ಪುರುಷರ ಅಧೀನರೆಂದು ಪರಿಭಾವಿಸಿ ಸಂಪ್ರದಾಯದ ಹೆಸರಿನಲ್ಲಿ ಪ್ರತಿಗಾಮಿ ನೀತಿ ಮತ್ತು ಆಚರಣೆಗಳನ್ನು ಹುಟ್ಟು ಹಾಕುತ್ತವೆ. ಮಹಿಳೆಯರಿಗೆ ಸಂವಿಧಾನಾತ್ಮಕವಾಗಿ ದೊರಕಿರುವ ಸ್ವತಂತ್ರ ಮತ್ತು ನಾಗರೀಕತ್ವದ ಹಕ್ಕುಗಳಿಗೂ ಇದು ಮಾರಕವಾಗಿದೆ.

## ಶೇ. 33 ಮೀಸಲಾತಿಯ ವಿಚಾರದಲ್ಲಿ ದ್ರೋಹ

ಪಾರ್ಲಿಮೆಂಟಿನಲ್ಲಿ ಬಹುಸಂಖ್ಯಾತರಾಗಿದ್ದೂ ಮಹಿಳೆಯರಿಗೆ ಶೇ. 33 ಮೀಸಲಾತಿ ಮಸೂದೆಯನ್ನು ಅಂಗೀಕರಿಸದಿರುವುದು ಯುಪಿಎ–2 ಸರ್ಕಾರ ಎಸಗಿದ ಬಹುದೊಡ್ಡ ದ್ರೋಹವಾಗಿದೆ. ಈ ಮಸೂದೆಯನ್ನು ತಡೆಯುವಲ್ಲಿ ಬಿಜೆಪಿಯ ನಿರಾಸಕ್ತಿಯೂ ಕಾರಣವಾಗಿತ್ತು. ಎಡಪಕ್ಷಗಳನ್ನು ಹೊರತುಪಡಿಸಿ ಇನ್ಯಾವುದೇ ವಿರೋಧ ಪಕ್ಷವೂ ಈ ಮಸೂದೆಯನ್ನು ಲೋಕಸಭೆಯಲ್ಲಿ ಸ್ವೀಕಾರಕ್ಕೆ ಒತ್ತಾಯಪಡಿಸಲಿಲ್ಲ. ನಿರ್ಧಾರ ತೆಗೆದುಕೊಳ್ಳುವ ಚುನಾಯಿತ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಅವರ ಸ್ಥಾನಮಾನ ದೊರೆಯದಂತೆ ಮಾಡಿರುವುದು ಪ್ರಜಾಪ್ರಭುತ್ವಕ್ಕೇ ಎಸಗಿದ ದ್ರೋಹವಾಗಿದೆ.

## ಹಿಂದೆಂದೂ ಕಂಡರಿಯದ ಮಹಿಳೆಯರ ಮೇಲಿನ ಹಿಂಸಾಚಾರ

**ಮಹಿಳೆಯರ ಮೇಲಿನ ಹಿಂಸಾಚಾರದ ಪ್ರಮಾಣ – ತೀವ್ರತೆ** : ದಿನವೊಂದಕ್ಕೆ 68 ಮಾನಭಂಗ ಪ್ರಕರಣಗಳು (ಘಂಟೆಯೊಂದಕ್ಕೆ ಮೂರು) ಮತ್ತು ದಿನವೊಂದಕ್ಕೆ 23 ವರದಕ್ಷಿಣೆ ಸಾವುಗಳು (ಸುಮಾರು ಘಂಟೆಗೊಂದು) ಸಂಭವಿಸಿವೆ. ಇವುಗಳು ಒಪ್ಪಲಸಾಧ್ಯವಾದ ವಿಚಾರಗಳು. ಮಹಿಳೆಯರನ್ನು ಸರಕಿನಂತ ಬಿಂಬಿಸುವ ನವ ಉದಾರೀಕರಣ ನೀತಿಗಳು ಮತ್ತು ಜಾತಿ, ಕೋಮುವಾದಿ ಶಕ್ತಿಗಳ ಪಿತೃಪ್ರಧಾನ ಸಾಂಪ್ರದಾಯಿಕ ಶಕ್ತಿಗಳು ಈ ಎರಡರಿಂದಲೂ ಮಹಿಳೆ ಹಿಂಸೆಗೆ ಒಳಪಡುತ್ತಿದ್ದಾಳೆ.

ಪ.ಬಂಗಾಳದಲ್ಲಿ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಹಿಂಸಾಚಾರವು ಎಲ್ಲಾ ವಿರೋಧಿ ಅಭಿಪ್ರಾಯಗಳನ್ನು ದಮನಿಸುವ ಅಲ್ಲಿಯ ಸರ್ಕಾರ ಬೆಂಬಲಿಸಿರುವ ಆಳುವ ಪಕ್ಷದ ನಡವಳಿಕೆಗಳು ರಾಜ್ಯದ ಎಲ್ಲಾ ಜನತೆಯ ಮೇಲೆ ಅದರಲ್ಲೂ

ಮುಖ್ಯವಾಗಿ ಮಹಿಳೆಯರ ಮೇಲೆ ಪರಿಣಾಮ ಬೀರಬಲ್ಲುದೆಂಬುದಕ್ಕೆ ಸಾಕ್ಷಿ. ಇದು ಪ.ಬಂಗಾಳದಲ್ಲಿ ಅಪರಾಧೀಕರಣಗೊಳ್ಳುತ್ತಿರುವ ರಾಜಕೀಯ ಮತ್ತು ಅಂತಹ ಅಪರಾಧಗಳಿಗೆ ಸಂಪೂರ್ಣ ಬೆಂಬಲ ನೀಡುವ, ಅಪಮಾನಕ್ಕೊಳಗಾಗಿ ದೂರು ನೀಡಿದ ಮಹಿಳೆಯರ ವಿರುದ್ಧವೇ ಕೀಳಾಗಿ ಮಾತನಾಡುವ ರಾಜ್ಯದ ಮುಖ್ಯಮಂತ್ರಿಯವರ ನಡತೆಯ ನೇರ ಪರಿಣಾಮ. ಲೈಂಗಿಕ ಕಿರುಕುಳಕ್ಕೊಳಗಾದ ಮಹಿಳೆಯರ ವಿಚಾರದಲ್ಲಿ ಸರ್ಕಾರದ ಮುಖ್ಯಸ್ಥರೊಬ್ಬರ ಇಂತಹ ಅಸಡ್ಡೆಯ ಧೋರಣೆ ದೇಶದಲ್ಲಿ ಇದೇ ಮೊದಲು. 2012 ರಲ್ಲಿ ಮಹಿಳೆಯರ ವಿರುದ್ಧದ ಒಟ್ಟು 30942 ಅಪರಾಧಗಳು ದಾಖಲಾಗಿದ್ದು, ಅದರಲ್ಲಿ 2046 ಮಾನಭಂಗ ಪ್ರಕರಣಗಳಾಗಿದ್ದು, 4168 ಅಪಹರಣದ ಪ್ರಕರಣಗಳಿರುವುದು ಸತತವಾಗಿ ಪ.ಬಂಗಾಳದಲ್ಲಿ ಎರಡನೆಯ ಬಾರಿಗೆ ಅತಿ ಹೆಚ್ಚು ದಾಖಲಾಗಿರುವ ಮಹಿಳೆಯರ ವಿರುದ್ಧದ ಹಿಂಸಾಚಾರವಾಗಿದೆ.

ಇತ್ತೀಚಿನ ರಾಷ್ಟ್ರೀಯ ಅಂಕಿ ಅಂಶಗಳಂತೂ ಅತ್ಯಂತ ಆಘಾತಕಾರಿಯಾಗಿವೆ. ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋದ ಅಂಕಿ ಅಂಶಗಳು ಮಹಿಳೆಯರ ವಿರುದ್ಧದ ಹಿಂಸಾಚಾರದ ಪ್ರಕರಣಗಳಲ್ಲಿ ಸತತ ಏರಿಕೆಯಾಗಿರುವುದನ್ನು ಸೂಚಿಸುತ್ತವೆ. 2012 ರಲ್ಲಿ ಒಟ್ಟು 2,44,290 ಪ್ರಕರಣಗಳು ದಾಖಲಾಗಿದ್ದು. ಅದು 2011 ರಲ್ಲಿ ಒಟ್ಟು ಅಪರಾಧಿಗಳಿಗಿಂತ ಶೇ. 6.8 ರಷ್ಟು ಹೆಚ್ಚಾಗಿದೆ. ಅತ್ಯಾಚಾರ ಪ್ರಕರಣಗಳಲ್ಲಿ ಶೇ. 12.4 (24,923) ಮತ್ತು ಅಪಹರಣ ಪ್ರಕರಣಗಳಲ್ಲಂತೂ ಆತಂಕಕಾರಿ ಶೇ. 28.4 ರಷ್ಟು (38262) ಹೆಚ್ಚಳವುಂಟಾಗಿದೆ. ವರದಿಯಾದ ಅತ್ಯಾಚಾರ ಪ್ರಕರಣಗಳಲ್ಲಿ ಶೇ. 50.2 ರಷ್ಟು ಮಹಿಳೆಯರು 18–30 ರ ವಯೋಮಾನದವರಾಗಿದ್ದರೆ ಶೇ. 12.5 ರಷ್ಟು 14 ವರ್ಷಕ್ಕೂ ಕಡಿಮೆ ವಯಸ್ಸಿನವರು. ಶೇ. 23.9 ರಷ್ಟು 14–18 ರ ವಯೋಮಾನಕ್ಕೆ ಸೇರಿದವರಾಗಿದ್ದಾರೆ. ದೇಶದಲ್ಲಿನ 53 ದಶಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳಲ್ಲಿ ದೆಹಲಿಯಲ್ಲೇ ಶೇ. 19.3 ಮಾನಭಂಗ ಪ್ರಕರಣಗಳು ದಾಖಲಾಗಿದ್ದರೆ, ಶೇ. 23.1 ಅಪಹರಣ ಪ್ರಕರಣಗಳು, ಶೇ. 14.6 ರಷ್ಟು ವರದಕ್ಷಿಣೆ ಸಾವಿನ ಪ್ರಕರಣಗಳು ಮತ್ತು ಶೇ. 10.9 ರಷ್ಟು ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ.

ಆರ್‌ಎಸ್‌ಎಸ್ ಪ್ರತಿಪಾದನೆಗೆ ಭಿನ್ನವಾಗಿ ಗ್ರಾಮೀಣ ಭಾರತವೂ ಈ ವಿಚಾರಕ್ಕೆ ಹೊರತಾಗಿಲ್ಲ. ದಲಿತ, ಬುಡಕಟ್ಟು ಮತ್ತು ಇತರ ದುರ್ಬಲ ಮಹಿಳೆಯರ ಪರಿಸ್ಥಿತಿಯಂತೂ ಇನ್ನೂ ದುರ್ಬಲವಾಗಿದೆ. 9ನೇ ಸೆಪ್ಟೆಂಬರ್ ನಿಂದ 11 ಅಕ್ಟೋಬರ್

2012 ರ ಅವಧಿಯಲ್ಲಿ ಹರ್ಯಾಣದಲ್ಲಿ 19 ಲೈಂಗಿಕ ಅತ್ಯಾಚಾರ ಘಟನೆಗಳು ನಡೆದಿವೆ. ಶೇ. 70 ರಷ್ಟು ಘಟನೆಗಳಂತೂ ಸಾಮೂಹಿಕ ಅತ್ಯಾಚಾರಗಳು. ಶೇ. 30 ರಷ್ಟು ಘಟನೆಗಳಲ್ಲಿ ಬಲಿಯಾದವರು ದಲಿತರು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದವರು. ಬಲಿಯಾದ ಮಹಿಳೆಯರಲ್ಲಿ ಶೇ. 47 ರಷ್ಟು 20 ವರ್ಷಕ್ಕಿಂತ ಕಿರಿಯ ವಯಸ್ಸಿನವರು. ಮಹಿಳೆಯರ ಮೇಲಿನ ಹಿಂಸಾಚಾರದ ಹೊಸ ಮತ್ತು ಹಳೆಯ ವಿಧಾನಗಳಂತೂ ಮೈ ನಡುಗಿಸುವಷ್ಟು ಭೀಕರವಾಗಿವೆ. ಏರುತ್ತಿರುವ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ಮೇಲಿನ ಅತ್ಯಾಚಾರ, ಆಸಿಡ್ ದಾಳಿ, ಕುಟುಂಬ ಗೌರವದ ಹೆಸರಿನಲ್ಲಿ ಕೊಲೆ ಮತ್ತು ಅಪರಾಧಗಳು, ಸಾಮೂಹಿಕ ಅತ್ಯಾಚಾರ ಈ ಎಲ್ಲವೂ ಅದರಲ್ಲಿ ಸೇರಿವೆ.

ಆಘಾತಕಾರಿಯಾದ ಇನ್ನೊಂದು ಅಂಶವೆಂದರೆ ರಾಷ್ಟ್ರೀಯ ಅಪರಾಧ ವರದಿ ಬ್ಯೂರೋದ ಅಂಕಿ ಅಂಶಗಳ ಪ್ರಕಾರ 2001 ರಿಂದ 2011 ರ ಅವಧಿಯಲ್ಲಿ ಮಕ್ಕಳ ಮೇಲಿನ ಲೈಂಗಿಕ ದಾಳಿ ಪ್ರಕರಣಗಳ ಸಂಖ್ಯೆ 43338; ಈ ಅವಧಿಯಲ್ಲಿ ಬಾಲಕಿಯರ ಮೇಲಿನ ಅತ್ಯಾಚಾರ ಪ್ರಕರಣಗಳ ಸಂಖ್ಯೆಯಲ್ಲಿ ಶೇ. 336 ರಷ್ಟು ಹೆಚ್ಚಳ ಉಂಟಾಗಿದೆ. ಇಂತಹ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿರುವುದು ಮಧ್ಯ ಪ್ರದೇಶದಲ್ಲಿ. ನಂತರದ ಸ್ಥಾನ ಮಹಾರಾಷ್ಟ್ರ, ಉತ್ತರ ಪ್ರದೇಶ, ಆಂಧ್ರಪ್ರದೇಶ ಮತ್ತು ಚತ್ತೀಸ್ ಘಡ ರಾಜ್ಯಗಳದ್ದು. ಇನ್ನೊಂದು ಆಘಾತಕಾರಿ ವಿಷಯವೆಂದರೆ ಏಷ್ಯಾದ ಮಾನವ ಹಕ್ಕುಗಳ ಕೇಂದ್ರ ಹೊರ ತಂದಿರುವ ವರದಿಯ ಪ್ರಕಾರ ಅದು ಅಧ್ಯಯನ ಮಾಡಿದ 39 ಪ್ರಕರಣಗಳಲ್ಲಿ ಹನ್ನೊಂದು ಪ್ರಕರಣಗಳು ಸರ್ಕಾರ ನಡೆಸುವ ನಿರ್ವಹಣಾ ಕೇಂದ್ರಗಳಲ್ಲೇ ವರದಿಯಾಗಿವೆ. ಉಳಿದ 27 ಪ್ರಕರಣಗಳು ವರದಿಯಾಗಿರುವುದು ಖಾಸಗಿ / ಸರ್ಕಾರೇತರ ಸಂಸ್ಥೆಗಳು ನಡೆಸುವ ನಿರ್ವಹಣಾ ಕೇಂದ್ರ, ಅನಾಥಾಲಯಗಳಲ್ಲಿ. ನಿರ್ವಹಣಾಧಿಕಾರಿಗಳಲ್ಲದೆ, ಕಾವಲುಗಾರರು, ಅಡುಗೆಯವರು ಮತ್ತು ಹಿರಿಯ ಸಹವಾಸಿಗಳೇ ಈ ಅಪರಾಧಗಳನ್ನೆಸಗಿರುವವರು. ಖಾಸಗಿ ಸಂಸ್ಥೆಗಳಲ್ಲಂತೂ ವ್ಯವಸ್ಥಾಪಕರು, ನಿರ್ದೇಶಕರು, ಸಂಸ್ಥಾಪಕರು ಮತ್ತವರ ಸ್ನೇಹಿತರು ಹಾಗೂ ಸಂಬಂಧಿಗಳೂ ಇವರಲ್ಲಿ ಸೇರಿದ್ದಾರೆ. ವಿದ್ಯಾಭ್ಯಾಸಕ್ಕಾಗಿ ಮನೆಯಿಂದ ಹೊರಬಂದು ವಸತಿ ಕೇಂದ್ರಗಳಲ್ಲಿರುವ ಬಾಲಕಿಯರಿಗೆ ರಕ್ಷಣೆ ನೀಡುವಲ್ಲಿ ಸರ್ಕಾರ ಸೋತಿದೆ.

ನ್ಯಾಯಮೂರ್ತಿ ವರ್ಮಾ ಸಮಿತಿಯು ಲೈಂಗಿಕ ಹಿಂಸೆ ತಡೆಯುವಲ್ಲಿ

ತೆಗೆದುಕೊಳ್ಳಬೇಕಾದ ಕ್ರಮಗಳನ್ನು ವಿವರಿಸಿದೆ. ಸಿಪಿಐ(ಎಂ) ಈ ವರದಿಗೆ ತನ್ನ ಬೆಂಬಲ ಸೂಚಿಸುತ್ತದೆ. ಈ ಕ್ರಮಗಳ ಸಂಪೂರ್ಣ ಅನುಷ್ಠಾನಕ್ಕಾಗಿ ಹೋರಾಟ ನಡೆಸಲು ಬದ್ಧವಾಗಿದೆ. ಡಿಸೆಂಬರ್ 16, 2012 ರಲ್ಲಿ ದೆಹಲಿಯಲ್ಲಿ ನಡೆದ ಮಾನಭಂಗ ಮತ್ತು ಕೊಲೆ ಪ್ರಕರಣಕ್ಕೆ ಪ್ರತಿಯಾಗಿ ಭುಗಿಲೆದ್ದ ಜನತೆಯ ಆಕ್ರೋಶದ ಹಿನ್ನೆಲೆಯಲ್ಲಿ ಅಪರಾಧಿ ಕಾನೂನುಗಳ ತಿದ್ದುಪಡಿ ಮತ್ತು ನ್ಯಾಯಾಂಗ ಸುಧಾರಣೆಗಾಗಿ ಮಾಡಿರುವ ಶಿಫಾರಸ್ಸುಗಳ ಜಾರಿಗಾಗಿಯೂ ಹೋರಾಟ ನಡೆಸಲು ಬದ್ಧವಾಗಿದೆ. ಅಪರಾಧಿಗಳನ್ನು ಶಿಕ್ಷಿಸಲು ತೊಡಕಾಗಿರುವ ಅಪರಾಧ ನ್ಯಾಯ ಕಾನೂನಿನ ಕೊರತೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಬೇಡಿಕೆಯನ್ನೂ ಮುಂದಿಡುತ್ತಿದೆ. ಪರಿಣಾಮವಾಗಿ ಕಡಿಮೆ ಪ್ರಮಾಣದಲ್ಲಿರು ಶಿಕ್ಷೆಗೆ ಒಳಗಾಗಿರುವ ಅಪರಾಧಗಳ ಪ್ರಮಾಣದಲ್ಲಿನ (ಶೇ. 24 ರಷ್ಟು ಮಾನಭಂಗ, ಶೇ. 32 ರಷ್ಟು ವರದಕ್ಷಿಣೆ ಸಾವು, ಶೇ. 21.2 ರಷ್ಟಿರುವ ಮಹಿಳೆಯರ ಮೇಲಿನ ಹಿಂಸಾಚಾರ ಮತ್ತು ಅಪರಾಧ) ಸಮಸ್ಯೆಯನ್ನು ಪರಿಹರಿಸಬಹುದು.

**ಪುರೋಗಾಮಿ ಶಕ್ತಿಗಳ ಪ್ರಕಾರ ಮಹಿಳೆಯರ ಮೇಲಿನ ಅಪರಾಧಗಳನ್ನು ನಿಯಂತ್ರಿಸಬೇಕೆಂದರೆ ಅವರು ಮನೆಯೊಳಗಿನ ಚೌಕಟ್ಟಿಗೇ ಸೀಮಿತವಾಗಿರಬೇಕೆಂಬುದು!** – ಹಾಗಾದರೆ ನಿಜಾಂಶವೇನು? ಕೆಲವು ಅತಿ ಹೆಚ್ಚಿನ ಅಪರಾಧಗಳು ನಡೆಯುವುದೇ ಮನೆಯ ನಾಲ್ಕು ಗೋಡೆಗಳೊಳಗೆ. NCRB ವರದಿ ಮಾಡುವಂತೆ 8233 ವರದಕ್ಷಿಣೆ ಸಾವು (See 302/304 IPC), 106527 ಗಂಡ ಮತ್ತು ಸಂಬಂಧಿಕರಿಂದ ಹಿಂಸಾಚಾರ (See 498-A IPC), 9038 ವರದಕ್ಷಿಣೆ ಸಾವಿನ ಪ್ರಕರಣಗಳು ಒಟ್ಟು ಮಹಿಳೆಯರ ಮೇಲಿನ ಹಿಂಸಾಚಾರದ ಶೇ. 50 ಕ್ಕೂ ಹೆಚ್ಚಾಗಿವೆ. ಇದು ಮನೆಯೊಳಗಿನ ಹಿಂಸಾಚಾರವೆಂಬ ಅಪರಾಧದ ಮಟ್ಟವಾಗಿದೆ. ಕೌಟುಂಬಿಕ ಹಿಂಸಾಚಾರದ ವಿರುದ್ಧ ಹೆಚ್ಚು ಹೆಚ್ಚು ಮಹಿಳೆಯರು ದೂರು ನೀಡಲು ಮುಂದಾಗುತ್ತಿದ್ದರೂ, ಅಂತಹ ಮಹಿಳೆಯರಿಗೆ ನ್ಯಾಯ ಒದಗಿಸುವ ಕ್ರಮ ಕೈಗೊಳ್ಳಲು ಬಜೆಟ್‌ನಲ್ಲಿ ಯಾವುದೇ ಮೊತ್ತ ಮೀಸಲಾಗಿಟ್ಟಿಲ್ಲ. ಸಂಪನ್ಮೂಲ ಕೊರತೆಯಿರುವ ಕೆಲವು ರಾಜ್ಯಗಳಲ್ಲಂತೂ ರಕ್ಷಣಾಧಿಕಾರಿಗಳಾಗಲಿ, ಅಗತ್ಯವಿರುವ ಮೂಲ ಸೌಲಭ್ಯಗಳಾಗಲಿ ಅಸ್ತಿತ್ವದಲ್ಲೇ ಇಲ್ಲ. ಲಭ್ಯವಿರುವ ಕಾನೂನುಗಳನ್ನು ಸಂಪೂರ್ಣ ಜಾರಿ ಮಾಡುವುದು, ಅಗತ್ಯ ಸಾಮಾಜಿಕ ಪರಿವರ್ತನಾ ಚಳುವಳಿಗಳು, ಎಳೆಯರಿಗೆ ಉತ್ತಮ ಶಿಕ್ಷಣ, ಮನೆಯೊಳಗೆ ಮತ್ತು ಮನೆಯ ಹೊರಗೆ ಎರಡೂ ಕಡೆಗಳಲ್ಲಿ ಹೆಣ್ಣು ಮತ್ತು ಗಂಡನ್ನು ಸಮಾನವಾಗಿ

ಕಾಣುವುದು ಈ ಎಲ್ಲವೂ ಮಹಿಳೆಯರಿಗೆ ಉತ್ತಮ ಸ್ಥಾನಮಾನ ಗಳಿಸುವಲ್ಲಿ ಇಂದಿನ ತುರ್ತು ಅಗತ್ಯವಾಗಿದೆ.

ಮಹಿಳಾ ಸಂಘಟನೆಗಳ 16 ವರ್ಷಗಳ ನಿರಂತರ ಹೋರಾಟದ ಫಲವಾಗಿ ವಿಶಾಖ ತೀರ್ಪಿನ ಆಧಾರದಲ್ಲಿ ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ತಡೆ ಕಾನೂನನ್ನು ಜಾರಿಗೆ ತರಲು ಸಾಧ್ಯವಾಗಿದೆ. ಇದರಲ್ಲಿನ ಕೆಲವು ಗಂಭೀರ ಕೊರತೆಗಳನ್ನು ನೀಗುವಲ್ಲಿ ಸಿಪಿಐ(ಎಂ) ಹಲವಾರು ತಿದ್ದುಪಡಿಗಳನ್ನು ಸೂಚಿಸಿದೆ. ದುರುದೃಷ್ಟವಶಾತ್ ಸರ್ಕಾರ ಮತ್ತು ಅಧಿಕೃತ ವಿರೋಧ ಪಕ್ಷ ಬಿಜೆಪಿ ಎರಡೂ ಈ ತಿದ್ದುಪಡಿಗಳನ್ನು ವಿರೋಧಿಸಿವೆ. ಸಿಪಿಐ(ಎಂ) ಈ ಕಾನೂನನ್ನು ಇನ್ನಷ್ಟು ಬಲಗೊಳಿಸಲು ಸಂಪೂರ್ಣವಾಗಿ ಬದ್ಧವಾಗಿವೆ.

## ಹೆಣ್ಣು ಭ್ರೂಣ ಹತ್ಯೆ:

ದೇಶದ ಒಟ್ಟು 27 ರಾಜ್ಯಗಳು ಮತ್ತು 11 ಕೇಂದ್ರಾಡಳಿತ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳ ಪ್ರಮಾಣ ಇಳಿಮುಖವಾಗುತ್ತಿರುವುದನ್ನು ಅಂಕಿ ಅಂಶಗಳು ಹೊರತಂದಿವೆ. 2001 ರಿಂದ 2011 ರ ಅವಧಿಯಲ್ಲಿ ಈ ಲಿಂಗಾನುಪಾತ 927 ರಿಂದ 914 ಕ್ಕೆ ಇಳಿದಿದೆ. ಜನಗಣತಿ ವರದಿ 2011 ರ ಪ್ರಕಾರ 1–6 ವರ್ಷ ವಯೋಮಾನದ ಗುಂಪಿನಲ್ಲಿ ಲಿಂಗಾನುಪಾತ 919ಕ್ಕಿಳಿದಿದೆ. 7 ರಿಂದ 15 ವರ್ಷದ ಗುಂಪಿನಲ್ಲಂತೂ ಈ ಅನುಪಾತ 911 ರಷ್ಟಿದೆ. PCPNDT ಕಾನೂನ್ನು ಜಾರಿ ಮಾಡುವಲ್ಲಿ ಸರ್ಕಾರ ಸಂಪೂರ್ಣವಾಗಿ ಸೋತಿದೆ ಎಂಬುದನ್ನು ಈ ಅಂಕಿ ಅಂಶಗಳು ತೋರುತ್ತವೆ. ಹೆಣ್ಣು ಮಕ್ಕಳ ವರದಿಯಲ್ಲಿ ಹೆಚ್ಚುತ್ತಿರುವ ಅಸಡ್ಡೆ ಮತ್ತು ಕ್ರೌರ್ಯಗಳಿಗೆ ಬಿಜೆಪಿ ಮತ್ತು ಕಾಂಗ್ರೆಸ್‌ನ ನೀತಿಗಳು ಹೇಗೆ ಪೂರಕವಾಗಿದೆಯೆಂಬುದನ್ನು ಇದು ಸೂಚಿಸುತ್ತದೆ. ಲಿಂಗಾನುಪಾತದ ವಿಚಾರದಲ್ಲಿ ಮೋದಿಯವರ ಗುಜರಾತ್ ಅತ್ಯಂತ ನಿಕೃಷ್ಟ ದಾಖಲೆ ಹೊಂದಿದೆ.

## ಮಹಿಳೆಯರ ವಿರುದ್ಧ ಕೋಮುವಾದಿ ಹಿಂಸಾಚಾರ

ಮುಜಾಫರ್ ನಗರದಲ್ಲಿ ನಡೆದ ಕೋಮು ಗಲಭೆ ಮತ್ತು ಅಲ್ಲಿನ ಅಲ್ಪಸಂಖ್ಯಾತ ಮಹಿಳೆಯರ ಮೇಲೆ ನಡೆದ ಅತ್ಯಾಚಾರಗಳು ಹಿಂದುತ್ವವಾದಿ ಬಣಗಳು ನಡೆಸಬಯಸುವ ಛಿದ್ರಕಾರಿ, ಕೋಮುವಾದಿ ರಾಜಕೀಯ ಕೀಳು ಅಭಿರುಚಿಗೆ

ಸೂಚಕವಾಗಿದೆ. ಮುಂಬರುವ ಚುನಾವಣೆಗಳನ್ನು ಗಮನದಲ್ಲಿರಿಸಿಕೊಂಡು ಆರ್‌ಎಸ್‌ಎಸ್ ನ ಸಿದ್ಧಾಂತಗಳಿಂದ ಪ್ರೇರಿತವಾಗಿರುವ ಹಲವಾರು ಸಂಘ ಸಂಸ್ಥೆಗಳು ಈ ಇಡೀ ಪ್ರಾಂತ್ಯದಲ್ಲಿ ವಿಭಜನೆ ಮತ್ತು ದ್ವೇಷಕಾರಿ ಬೀಜ ಬಿತ್ತುವ ಕೆಲಸ ಮಾಡುತ್ತಿರುವುದು ಈಗಾಗಲೇ ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಮಹಿಳೆಯರಿಗೆ ಸುರಕ್ಷತೆ ಒದಗಿಸುವ ನೆಪದಲ್ಲಿ 'ಬೇಟಿ, ಬಹು ಬಚಾವೋ' ಎಂಬ ವೇದಿಕೆಯನ್ನು ಬಳಸಿಕೊಂಡು ಲೈಂಗಿಕ ದೌರ್ಜನ್ಯಗಳಿಗೆ ಅಲ್ಪಸಂಖ್ಯಾತರನ್ನೇ ಹೊಣೆಗಾರರಾಗಿಸಿರುವುದು ನಿಜಕ್ಕೂ ನಾಚಿಕೆಗೇಡಿನ ವಿಷಯವಾಗಿದೆ. ವಾಸ್ತವವೆಂದರೆ ಪೊಲೀಸ್ ವರದಿಗಳ ಪ್ರಕಾರ ಈ ಪ್ರದೇಶದಲ್ಲಿ ನಡೆದ ಲೈಂಗಿಕ ಅತ್ಯಾಚಾರದ ಪ್ರಕರಣಗಳಲ್ಲಿ ಭಾಗಿಯಾದವರಲ್ಲಿ ಎರಡೂ ಕೋಮಿನ ಗಂಡಸರಿದ್ದರು.ಇದಕ್ಕೆ ಬಲಿಯಾದವರಲ್ಲಿ ಎರಡೂ ಕೋಮಿನ ಮಹಿಳೆಯರಿದ್ದರು. ಎಲ್ಲ ಜಾತಿ ಮತ್ತು ಮತಗಳ ನಡುವೆ ಸೌಹಾರ್ದಕ್ಕೆ ಹೆಸರಾಗಿದ್ದ ಜಾಗದಲ್ಲಿ ಭಾವೋದ್ವೇಗವನ್ನು ಹುಟ್ಟು ಹಾಕಿ ಅತ್ಯಂತ ಹೀನಾಯವಾದ ಹಿಂಸಾಚಾರಕ್ಕೆಡೆ ಮಾಡಲಾಯಿತು. ಇನ್ನಿತರ ಪ್ರದೇಶಗಳಲ್ಲೆಲ್ಲಾ ಆರ್‌ಎಸ್‌ಎಸ್ ಪ್ರೇರಿತ ಸಂಘಟನೆಗಳು ಕೋಮುವಾದಿ ವಿಭಜನೆಗಳನ್ನು ಹುಟ್ಟು ಹಾಕುತ್ತಿವೆ. ಇವುಗಳು 'ಇತರ ಕೋಮಿನವರಿಗೆ ಪಾಠ ಕಲಿಸಲು' ಮಹಿಳೆಯರನ್ನು ಗುರಿಯಾಗಿ ಬಳಸುವ ಮನೋವೃತ್ತಿಯಿಂದಾಗಿ ಮಹಿಳೆಯರ ಬದುಕನ್ನು ಬಹಳ ದುರ್ಬಲಗೊಳಿಸುತ್ತವೆ. ಕೋಮುವಾದಿ ಶಕ್ತಿಗಳನ್ನು ಮತ್ತು ಅವುಗಳ ದ್ವೇಷಪೂರಿತ ಹಿಂಸೆಯಿಂದ ಗುರುತಿಸಿರುವ ಸಿದ್ಧಾಂಗಳು ಮತ್ತು ಆಚರಣೆಗಳ ವಿರುದ್ಧ ಹೋರಾಟಕ್ಕೆ ಕಟಿಬದ್ಧವಾದ ಶಕ್ತಿಗಳನ್ನು ಬೆಂಬಲಿಸುವ ಮತ್ತು ಬಲಪಡಿಸುವುದರೊಂದಿಗೆ ಮಹಿಳೆಯರ ರಕ್ಷಣೆ ತಳಕು ಹಾಕಿಕೊಂಡಿದೆ.

## ಸಂಪ್ರದಾಯವಾದಿಗಳ ಪ್ರತಿದಾಳಿ ಮತ್ತು ನೈತಿಕ ಪೊಲೀಸ್‌ಗಿರಿ

ಮಹಿಳೆಯರು ತಮ್ಮ ವೈಯಕ್ತಿಕ ಬದುಕಿನ ಬಗ್ಗೆ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಂಡಾಗ ಅವರ ಮೇಲೆ ದಾಳಿ ನಡೆಸುವ ಜಾತಿವಾದಿ ಮತ್ತು ಪ್ರತಿಗಾಮಿ ಶಕ್ತಿಗಳ ಪ್ರತಿದಾಳಿಗೂ ಮಹಿಳೆಯರ ವಿರುದ್ಧದ ಅಪರಾಧಿ ಹಿಂಸಾಚಾರಕ್ಕೂ ನೇರ ಸಂಬಂಧವಿದೆ. ತಮ್ಮ ಬಾಳ ಸಂಗಾತಿಗಳನ್ನು ಸ್ವತಃ ಆಯ್ಕೆ ಮಾಡಿಕೊಳ್ಳುವ, ಅಂತರ್ ಜಾತೀಯ ವಿವಾಹಕ್ಕೆ ಸಜ್ಜಾಗುವ ಯುವಜನತೆ ಅವರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಬಯಸುವ, ಅವರಿಗೆ ಆದೇಶ ನೀಡುವ ಕಾಪ್ ಪಂಚಾಯತ್‌ಗಳ ಕೋಪಕ್ಕೆ ತುತ್ತಾಗುತ್ತಿದ್ದಾರೆ. ವೋಟ್ ಬ್ಯಾಂಕ್ ರಾಜಕಾರಣದೊಂದಿಗೆ ಥಳುಕು

ಹಾಕಿಕೊಂಡಿರುವುದರಿಂದ ಇಂತಹ ಕಾಪ್ ಪಂಚಾಯತಿಗಳು ನಡೆಸುವ ಹಿಂಸಾಚಾರ ವ್ಯಾಪಕಗೊಳ್ಳುತ್ತಿದೆ. ತಮಗೆ ರಾಜಕೀಯ ಬೆಂಬಲ ದೊರೆಯದೆ ಹೋಗಬಹುದೆಂಬ ಕಾರಣಕ್ಕಾಗಿ ಸರ್ಕಾರಗಳೂ ಇಂತಹ ಅಸಂವಿಧಾನಾತ್ಮಕ ವ್ಯವಸ್ಥೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ಹೆದರುತ್ತವೆ. ಮರ್ಯಾದಾ ಹತ್ಯೆ, ಯುವಜನತೆಯ ಬಾಳಸಂಗಾತಿಯ ಆಯ್ಕೆಯ ಹಕ್ಕನ್ನು ಅಲ್ಲಗಳೆದು ಹಿಂಸಾಚಾರ ಹರಡುವ ಇಂತಹ ಕಾಪ್ ಪಂಚಾಯತ್‌ಗಳನ್ನು ನಿಯಂತ್ರಿಸಲು ಸಶಕ್ತ ಕಾನೂನನ್ನು ರೂಪಿಸಿ, ಜಾರಿ ಮಾಡಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಮಹಿಳೆಯರ ಮೇಲೆ ನಡೆಯುವ ಹಿಂಸಾಚಾರಕ್ಕೆ ಅವರನ್ನೇ ಹೊಣೆಗಾರರಾಗಿಸುವ ಪುರೋಗಾಮಿ, ಪುರುಷ ಪ್ರಧಾನ ಶಕ್ತಿಗಳೂ ಮಹಿಳೆಯರ ಮೇಲಿನ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸುತ್ತವೆ. ಎಲ್ಲಾ ಧರ್ಮಗಳಲ್ಲಿರುವ ಮೂಲಭೂತವಾದಿಗಳೂ ಮಹಿಳೆಯರ ಮೇಲೆ ವಸ್ತ್ರ ಸಂಹಿತೆ, ಮೊಬೈಲ್ ಫೋನ್‌ಗಳ ಮೇಲೆ ನಿಷೇಧ, ಸಹ ಶಿಕ್ಷಣದ ವಿರೋಧದಂತಹ ಕ್ರಮಗಳ ಮೂಲಕ ನೈತಿಕ ಪೊಲೀಸ್ ಗಿರಿ ನಡೆಸುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಮಹಿಳೆಯರ ಸುರಕ್ಷತೆಯ ನೆಪದಲ್ಲಿ ಮಹಿಳೆಯರ ಮೇಲೆ ಹೆಚ್ಚು ಹೆಚ್ಚು ನಿಯಂತ್ರಣ ಹೇರುವ ಪ್ರಯತ್ನಗಳಾಗುತ್ತಿವೆ. ಇದು ಮಹಿಳೆಯರ ಸಂವಿಧಾನಾತ್ಮಕ ಹಕ್ಕುಗಳ ಮೇಲಾಗುತ್ತಿರುವ ನೇರ ದಾಳಿಯಾಗಿದೆ.

ಇಂತಹ ಪ್ರತಿಗಾಮಿ, ಕೋಮುವಾದಿ ಮತ್ತು ವಿಭಜಕ ಶಕ್ತಿಗಳ ಮಹಿಳಾ ವಿರೋಧಿ ಸಿದ್ಧಾಂತಗಳ ವಿರುದ್ಧ ಹೋರಾಟ ನಡೆಸಲು ಸಿಪಿಐ(ಎಂ) ಬದ್ಧವಾಗಿದೆ.

## ತೀವ್ರಗೊಂಡಿರುವ ಸಾಮಾಜಿಕ ಅಸಮಾನತೆ

ಕಳೆದ ಮೂರು ವರ್ಷಗಳ ಇನ್ನೊಂದು ಭಯಾನಕ ಬೆಳವಣಿಗೆಯೆಂದರೆ ದಲಿತರ ಮೇಲೆ ಅದರಲ್ಲೂ ಮುಖ್ಯವಾಗಿ ದಲಿತ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಹಿಂಸಾಚಾರ NCRB ಅಂಕಿ ಅಂಶಗಳ ಪ್ರಕಾರ 2012 ರಲ್ಲಿ 1576 ದಲಿತ ಮಹಿಳೆಯರ ಮಾನಭಂಗ ಪ್ರಕರಣಗಳು ವರದಿಯಾಗಿವೆ. 2010 ರಲ್ಲಿ ಇಂತಹ ಪ್ರಕರಣಗಳ ಸಂಖ್ಯೆ 1349 ರಷ್ಟಿತ್ತು. ಮಧ್ಯಪ್ರದೇಶ, ಉತ್ತರ ಪ್ರದೇಶ ಮತ್ತು ರಾಜಸ್ಥಾನಗಳಲ್ಲೇ ಶೇ. 50–60 ರಷ್ಟು ಪ್ರಕರಣಗಳು ದಾಖಲಾಗಿವೆ. ಹರ್ಯಾಣದಲ್ಲಿಯಂತೂ ಈ ಅವಧಿಯಲ್ಲಿ 67 ಪ್ರಕರಣಗಳು ದಾಖಲಾಗಿದ್ದು ಹಿಂದಿನ ವರ್ಷಕ್ಕಿಂತ ಅದು ದುಪ್ಪಟ್ಟಾಗಿದೆ. ಸಂವಿಧಾನವು ಜಾತಿ ತಾರತಮ್ಯದ ವಿರುದ್ಧ ನಿರ್ದಿಷ್ಟ ಸೂಚನೆಗಳನ್ನು

ನೀಡಿದ್ದರೂ ಇಂದಿಗೂ ಅಸ್ಪೃಶ್ಯತೆಯು ದಲಿತರ ವಿರುದ್ಧದ ಹಿಂಸಾಚಾರವಾಗಿ ಮುಂದುವರೆದಿದೆ. ಎಡ ಪಕ್ಷಗಳ ಬೆಂಬಲದಿಂದ ನಡೆಯುತ್ತಿರುವ ದೇವಾಲಯ ಪ್ರವೇಶ, ಸ್ಮಶಾನದಲ್ಲಿ ಅವಕಾಶ ಮತ್ತು ಅಡ್ಡಗೋಡೆಗಳನ್ನು ಒಡೆಯುವ ಹೋರಾಟ ಮತ್ತು ಚಳುವಳಿಗಳು ಇದೇ ಅಂಶವನ್ನು ಎತ್ತಿ ಹಿಡಿಯುತ್ತವೆ.

ದಲಿತ ಮಹಿಳೆಯರ ಮೇಲಿನ ಹಿಂಸಾಚಾರ ಮತ್ತು ಜಾತಿ ತಾರತಮ್ಯದ ವಿರುದ್ಧದ ಎಲ್ಲ ಹೋರಾಟಗಳಿಗೆ ಸಿಪಿಐ(ಎಂ) ಬದ್ಧವಾಗಿದೆ.

**ಮಹಿಳೆ ಮತ್ತು ದುಡಿಮೆ:**

ಮಹಿಳೆಯರ ದುಡಿಮೆ ಅದೃಶ್ಯವಾಗಿದ್ದು ಸದಾ ಅಪಮೌಲ್ಯಕ್ಕೊಳಗಾಗಿದೆ. ಹೆಚ್ಚಿನ ಮಹಿಳೆಯರು ಅಸಂಘಟಿತ ವಲಯದ ಕೆಲಸಗಳಿಗೆ, ಮನೆಗೆಲಸದವರಾಗಿ, ಗುತ್ತಿಗೆ ಕೆಲಸಗಾರರಾಗಿ, ಗೃಹಾಧಾರಿತ ಕೆಲಸಗಳಿಗೆ ತಳ್ಳಲ್ಪಡುತ್ತಿದ್ದಾರೆ. ಕಡಿಮೆ ವೇತನ, ಯಾವುದೇ ಕಾನೂನಿನ ರಕ್ಷಣೆಯಿಲ್ಲದೆ ಅವರು ಹೆಚ್ಚು ಹೆಚ್ಚು ಶೋಷಣೆಗಳಿಗೆ ಬಲಿಯಾಗುತ್ತಿದ್ದಾರೆ. ಚಿಲ್ಲರೆ ವ್ಯಾಪಾರದ ಕ್ಷೇತ್ರಕ್ಕೆ ಎಫ್‌ಡಿಐ ಪ್ರವೇಶದಿಂದಾಗಿ ಸ್ವ ಉದ್ಯೋಗದಲ್ಲಿ ತೊಡಗಿರುವ ಹಲವಾರು ಮಹಿಳೆಯರ ಬದುಕಿನ ಮೇಲೆ ತೀವ್ರ ಪರಿಣಾಮವುಂಟಾಗಲಿದೆ. ಹಲವಾರು ಮಹಿಳೆಯರು ಸಂಕಷ್ಟದಿಂದ ವಲಸೆ ಹೋಗಿ ಅಸುರಕ್ಷಿತ ಮತ್ತು ತೀವ್ರ ಶೋಷಣೆಯ ಕೆಲಸಗಳಲ್ಲಿ ತೊಡಗಿಕೊಳ್ಳುವಂತಾಗಿದೆ. ವಿಚಿತ್ರವೆಂದರೆ ಜೀವನ ನಿರ್ವಹಣೆಗಾಗಿ ಯಾವುದೆಂದರೆ ಆ ಕೆಲಸ ಕೈಗೆತ್ತಿಕೊಳ್ಳುವ ಪರಿಸ್ಥಿತಿಯಿರುವಾಗಲೂ 2004-05 ರಿಂದ 2009-10 ರ ತೀವ್ರ ಆರ್ಥಿಕ ಪ್ರಗತಿಯಾಗಿದ್ದ ಅವಧಿಯಲ್ಲೂ ಸುಮಾರು 2 ಕೋಟಿ ಮಹಿಳೆಯರು ಉದ್ಯೋಗವಕಾಶಗಳಿಂದ ಹೊರತಾಗಿ ಉಳಿದಿದ್ದಾರೆ.

ತಡೆಯಿಲ್ಲದೆ ಮುಂದುವರೆದಿರುವ ತೀವ್ರ ಕೃಷಿ ಬಿಕ್ಕಟ್ಟು ಗ್ರಾಮೀಣ ಪ್ರದೇಶಗಳಲ್ಲಿ ತೀವ್ರ ಸಂಕಷ್ಟಗಳನ್ನು ಹುಟ್ಟು ಹಾಕಿದೆ. NCRB ಯ ವರದಿಯಂತೆ 2,79,940 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2001 ರಿಂದ 2011 ರ ಅವಧಿಯಲ್ಲಿ ಸರಾಸರಿ 16743 ಅಂದರೆ ದಿನವೊಂದಕ್ಕೆ 46 ಆತ್ಮಹತ್ಯೆಗಳಾಗುತ್ತಿವೆ. ಮನೆಯ ಅನ್ನದಾತನನ್ನು ಕಳೆದುಕೊಂಡು ಸಂಸಾರದ ಭಾರ ಹೊರುತ್ತಿರುವ ವಿಧವೆಯರ ಪಾಡು ನವ ಉದಾರೀಕರಣ ನೀತಿಗಳು ಹುಟ್ಟು ಹಾಕಿರುವ ದುರಂತಕ್ಕೆ ಸಾಕ್ಷಿಯಾಗಿವೆ. ಇಷ್ಟೇ ಸಾಲದೆಂಬಂತೆ ಮಹಿಳೆಯರನ್ನು ಕೃಷಿಕರು ಅಥವಾ ರೈತರೆಂದು

ಗುರುತಿಸದಿರುವುದರಿಂದ ಅವರಿಗೆ ಯಾವುದೇ ಸಾಲ ಸೌಲಭ್ಯಗಳಾಗಲಿ, ವಿನಾಯ್ತಿ ಯೋಜನೆಗಳಾಗಲಿ ಲಭ್ಯವಾಗುತ್ತಿಲ್ಲ. ಕೃಷಿಯಲ್ಲಿ ಮಹಿಳೆಯರಿಗೆ ಸಂಬಂಧಿಸಿ ಸ್ಪಷ್ಟ ಕ್ರಮಗಳನ್ನೂ ಒಳಗೊಂಡಂತೆ ಕೃಷಿ ಸುಧಾರಣೆಗಾಗಿ ನೀಡಿದ್ದ ಸ್ವಾಮಿನಾಥನ್ ಆಯೋಗದ ವರದಿಯನ್ನೂ ಸರ್ಕಾರ ತಳ್ಳಿ ಹಾಕಿದೆ.

ಸಿಪಿಐ(ಎಂ) ಒತ್ತಾಸೆಯ ಕಾರಣದಿಂದ ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗದ ಸಂಕಷ್ಟ ನಿವಾರಣೆಗೆ ಪರಿಹಾರವಾಗಿ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು 2007–08 ರಿಂದ ಜಾರಿಗೆ ತರಲಾಗಿದೆ. ಈ ಯೋಜನೆಯಡಿ ಉದ್ಯೋಗ ಗಳಿಸಿರುವ ಮಹಿಳೆಯರ ಸಂಖ್ಯೆ 2006–07 ರಲ್ಲಿ ಶೇ. 41 ರಷ್ಟಿದ್ದದ್ದು, 2012–13 ಕ್ಕೆ ಶೇ. 52 ಕ್ಕೇರಿರುವುದು ಈ ಯೋಜನೆಗೆ ಬಡ ಮಹಿಳೆಯರು ತೋರಿರುವ ಉತ್ತಮ  ಪ್ರತಿಕ್ರಿಯೆ, ಹಾಗಿದ್ದೂ ಅತಿಹೆಚ್ಚಿನ ಉತ್ಪಾದಕತೆಯ ನಿಯಮದಿಂದಾಗಿ ಕೆಲವು ಮಹಿಳೆಯರಿಗೆ ಕನಿಷ್ಟ ವೇತನ ದೊರೆಯುತ್ತಿಲ್ಲ. ಈ ಯೋಜನೆಯಡಿ ದೊರೆಯಲೇ ಬೇಕಿದ್ದ 100 ದಿನಗಳ ಕನಿಷ್ಟ ಕೆಲಸದ ದಿನಗಳ ಬದಲಿಗೆ ಅದು 45 ದಿನಗಳಿಗೆ ಇಳಿದಿದೆ. ಈ ಯೋಜನೆಯಡಿ ಮೀಸಲಿಟ್ಟಿರುವ ಮೊತ್ತದಲ್ಲಿ ಕಡಿತವುಂಟಾಗಿದ್ದು, ಫಲಾನುಭವಿಗಳಿಗೆ ಕೆಲಸ ದೊರೆಯದಂತಾಗಿರುವುದು ಈ ಕಾಯ್ದೆಯ ನಿಯಮಗಳಿಗೆ ವಿರುದ್ಧವಾಗಿದೆ.

ಸಿಪಿಐ(ಎಂ) ಈ ಕಾಯ್ದೆಯ ಅನುಷ್ಠಾನಕ್ಕೆ ತೀವ್ರ ಹೋರಾಟ ನಡೆಸಿದೆ. ನಗರ ಪ್ರದೇಶಗಳಲ್ಲೂ ಉದ್ಯೋಗ ಖಾತ್ರಿ ಯೋಜನೆಗಾಗಿ ತನ್ನ ಹೋರಾಟವನ್ನು ಸಿಪಿಐ(ಎಂ) ಇನ್ನಷ್ಟು ತೀವ್ರಗೊಳಿಸಲಿದೆ.

## ಬೆಲೆ ಏರಿಕೆ ಮತ್ತು ಆಹಾರ ಭದ್ರತೆ

**ತಡೆಯಿರದ ಬೆಲೆಯೇರಿಕೆ:** ಏರುತ್ತಿರುವ ಬೆಲೆಗಳು ಮತ್ತು ಆಹಾರದ ಅಭದ್ರತೆ ಮಹಿಳೆಯರ ಮೇಲೆ ತೀವ್ರ ಪರಿಣಾಮವುಂಟು ಮಾಡಿದೆ. ಮನೆಯ ಒಟ್ಟು ಆದಾಯ ಕಡಿಮೆಯಿದ್ದು, ಮನೆಯವರೆಲ್ಲರಿಗೆ ಆಹಾರ ಒದಗಿಸುವ ಜವಾಬ್ದಾರಿ ಹೊತ್ತಿರುವ ಮಹಿಳೆಯರು ತಮ್ಮ ಆಹಾರ ಸೇವನೆಯನ್ನು ಕಡಿತ ಮಾಡಿಕೊಳ್ಳುತ್ತಿದ್ದಾರೆ. ದೇಶದ ಬಹುತೇಕ ಜನತೆಯನ್ನು ಬಾಧಿಸುತ್ತಿರುವ ಬೆಲೆ ಏರಿಕೆಯು ಮಹಿಳೆಯರ ಬದುಕಿನ ಮಟ್ಟ ಮತ್ತು ಅವರ ಬದುಕಿನ ಗುಣಮಟ್ಟವನ್ನು ಕುಗ್ಗಿಸಿದೆ. ಸಿಪಿಐ(ಎಂ) ನಿರಂತರವಾಗಿ ಪ್ರತಿವಾದಿಸುತ್ತಿರುವಂತೆ ಸರ್ಕಾರದ ನೀತಿಗಳು ಬದಲಾಗದೆ ಈ

ಸ್ಥಿತಿಯನ್ನು ಬದಲಾಯಿಸುವುದು ಸಾಧ್ಯವಿಲ್ಲ. ಈ ಹಿಂದೆ ಜಾರಿಯಲ್ಲಿದ್ದ ಪೆಟ್ರೋಲಿಯಂ /ಡೀಸೆಲ್ ಬೆಲೆ ನಿಯಂತ್ರಣ ಮತ್ತೆ ಜಾರಿಯಾಗಬೇಕು. ಅಗತ್ಯವಸ್ತುಗಳ ಮುಂಗಡ ವ್ಯಾಪಾರ ನಿಲ್ಲಬೇಕು ಮತ್ತು ಕಾಳಸಂತೆಕೋರರು ಮತ್ತು ಅಕ್ರಮ ಸಂಗ್ರಹಕಾರರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ದೋಷಪೂರಿತವಾಗಿರುವ ಆಹಾರ ಭದ್ರತಾ ಮಸೂದೆಯ ಬದಲಿಗೆ ಸಾರ್ವಜನಿಕ ಪಡಿತರ ಪದ್ಧತಿಯನ್ನು ಇನ್ನಷ್ಟು ಬಲಿಷ್ಟಗೊಳಿಸಬೇಕೆಂದು ಸಿಪಿಐ(ಎಂ) ಆಗ್ರಹ ಪಡಿಸುತ್ತದೆ.

ಸಿಪಿಐ(ಎಂ) ಪಕ್ಷವು ಕೆ.ಜಿ.ಯೊಂದಕ್ಕೆ ರೂ. 2 ಕ್ಕಿಂತ ಹೆಚ್ಚಾಗದಂತೆ ಪ್ರತಿ ಕುಟುಂಬಕ್ಕೂ 35 ಕೆ.ಜಿ. ಆಹಾರ ಧಾನ್ಯ ಒದಗಿಸುವ ಸಾರ್ವಜನಿಕ ಪಡಿತರ ಪದ್ಧತಿಯ ಜಾರಿಗೆ ಬದ್ಧವಾಗಿದೆ.

ಯುಪಿಎ ಮತ್ತು ಬಿಜೆಪಿ ಪಕ್ಷಗಳೆರಡೂ ಜನತೆಗೆ ಮೂಲಭೂತ ಸೇವೆಗಳನ್ನು ಒದಗಿಸುವುದಿರಂದ ಹಿಂಜರಿದಿರುವ ಕಾರಣದಿಂದ ಜನತೆಗೆ ಈ ಸೇವೆಗಳು ಅಲಭ್ಯವಾಗಿವೆ. ಈ ಎರಡೂ ಸರ್ಕಾರಗಳ ಖಾಸಗೀಕರಣ ನೀತಿಗಳಿಂದಾಗಿ ಆರೋಗ್ಯ ಮತ್ತು ಶಿಕ್ಷಣ ಈ ಎರಡೂ ಕ್ಷೇತ್ರಗಳು ಹಣ ಮಾಡುವ ದಂಧೆಗಳಾಗಿ ರೂಪಾಂತರಗೊಂಡಿವೆ. ಶಿಕ್ಷಣದ ಹಕ್ಕು ಕಾಯ್ದೆಯು ರಾಜಕೀಯ ಇಚ್ಛಾಶಕ್ತಿ ಮತ್ತು ಸಂಪನ್ಮೂಲ ಕೊರತೆಯ ಕಾರಣದಿಂದ ದುರ್ಬಲವಾಗಿದೆ. ಆರೋಗ್ಯ ಕ್ಷೇತ್ರವಂತೂ ತೀವ್ರವಾಗಿ ಖಾಸಗಿಯವರ ಮತ್ತು ಕಾರ್ಪೋರೇಟ್‌ಗಳ ಹಿಡಿತದಲ್ಲಿ ಸಿಲುಕಿದ್ದು ಬಡವರ ಪಾಲಿಗೆ ಈ ಸೇವೆಗಳು ಅಲಭ್ಯವಾಗಿವೆ. ದಿನನಿತ್ಯದ ಅಗತ್ಯಗಳೂ ಖಾಸಗೀಕರಣಕ್ಕೊಳಗಾಗುತ್ತಿವೆ. ಅಭಿವೃದ್ಧಿ ಹೊಂದಿರುವ ಭಾರತದಲ್ಲಿ ಶೇ. 58 ಕುಟುಂಬಗಳಿಗೆ ನಲ್ಲಿ ನೀರಿನ ಸೌಲಭ್ಯವಿಲ್ಲ. ಅರ್ಧಕ್ಕಿಂತ ಹೆಚ್ಚು ಮನೆಗಳಲ್ಲಿ ಶೌಚಾಲಯಗಳಿಲ್ಲ. ಬಿಜೆಪಿ ಮತ್ತು ಯುಪಿಎ ಸರ್ಕಾರಗಳ ಉದಾಸೀನದಿಂದಾಗಿ ಮಹಿಳೆಯರ ಈ ಸಂಕಷ್ಟ ಇನ್ನಷ್ಟು ಉಲ್ಬಣಗೊಂಡಿದೆ. ಸಾರ್ವಜನಿಕ ಸೇವೆಗಳನ್ನೊದಗಿಸುವಲ್ಲಿ ಸರ್ಕಾರದ ಖರ್ಚುವೆಚ್ಚಗಳು ನವ ಉದಾರೀಕರಣದ ಈ ದಿನಗಳಲ್ಲಿ ಅತ್ಯಂತ ಕಡಿಮೆಯಾಗಿವೆ. ಮೂಲಭೂತ ಹಕ್ಕಾಗಿ ನೀರು, ನೈರ್ಮಲ್ಯೀಕರಣ, ಮನೆ, ವಿದ್ಯಾಭ್ಯಾಸ ಮತ್ತು ಶಿಕ್ಷಣಗಳು ಎಲ್ಲರಿಗೂ ದೊರೆಯದೆ ಘತನೆಯ ಬದುಕಿಗೆ ಯಾವುದೆ ಖಾತ್ರಿಯಿರುವುದಿಲ್ಲ ಎಂಬುದು ಸಿಪಿಐ(ಎಂ)ನ ಸ್ಪಷ್ಟ ನಿಲುವಾಗಿದೆ.

ಮಹಿಳೆಯರ ಈ ಎಲ್ಲ ಸಮಸ್ಯೆ ಮತ್ತು ಬೇಡಿಕೆಗಳು ಪ್ರಜಾಸತ್ತಾತ್ಮಕ ಚಳುವಳಿಯ ಅವಿಭಾಜ್ಯ ಅಂಗವೆಂದು ಸಿಪಿಐ(ಎಂ) ಪರಿಭಾವಿಸುತ್ತದೆ. ಹಿಂಸೆಯಿರದ ವಾತಾವರಣ, ಸಾಮಾಜಿಕ ನ್ಯಾಯ ಮತ್ತು ಘನತೆಯ ಬದುಕಿನ ಮಹಿಳೆಯರ ಹಕ್ಕು ಸಿಪಿಐ(ಎಂ) ಪಕ್ಷದ ರಾಜಕೀಯ ಕಾರ್ಯಸೂಚಿಯ ಪ್ರಧಾನ ವಿಷಯವಾಗಿದೆ. ಸಿಪಿಐ(ಎಂ) ಪಕ್ಷವು ಮಹಿಳೆಯರ ಎಲ್ಲಾ ಮಾನವ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತದೆ. ಮಹಿಳೆಯರನ್ನು ದುಡಿಮೆಗಾರರಾಗಿ ಮತ್ತು ಪ್ರಜೆಗಳಾಗಿ ಹತ್ತಿಕ್ಕುವ ಮತ್ತು ಬಂಧನದಲ್ಲಿಡುವ ಬಹುಮುಖಿ ದಮನಕಾರಿ ಪ್ರವೃತ್ತಿಗಳನ್ನು ಬದಲಿಸಬಲ್ಲ ಬದಲಿ ಆರ್ಥಿಕ ನೀತಿಗಳಿಗಾಗಿ ಸದಾ ಕೆಲಸ ಮಾಡುತ್ತದೆ.

ಅನುವಾದ : **ಎಸ್.ಕೆ. ಗೀತಾ**

# ಕಾಂಗ್ರೆಸನ್ನು ತಿರಸ್ಕರಿಸಿ,
# ಬಿಜೆಪಿಯನ್ನು ಸೋಲಿಸಿ
# ಸಿಪಿಐ(ಎಂ)ಗೆ ಮತ ನೀಡಿ

# ಒಂದು ಜಾತ್ಯಾತೀತ ಮತ್ತು
# ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ
# ಎಡಪಕ್ಷಗಳನ್ನು ಬಲಪಡಿಸಿ

ಬೆಲೆ : ರೂ. 5.00


ಮೂಲ:

ಸಿಪಿಐ(ಎಂ) ಕೇಂದ್ರ ಸಮಿತಿ, ನವದೆಹಲಿ

ಪ್ರಕಟಣೆ:

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

ಕರ್ನಾಟಕ ರಾಜ್ಯ ಸಮಿತಿ

ನಂ. 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560086

ಮುದ್ರಣ: ಕ್ರಿಯಾ, ಎಸ್.ಆರ್. ನಗರ, ಬೆಂಗಳೂರು ಪ್ರತಿಗಳು: 3,000